ಮಾಟೇನಾ' ಗೌಡರೂ ದರ್ಪ ತೋರಿದರು.

'ನಾವಿನ್ನು ಸ್ವಾಸಕರ್ನೆ ಕೇಳ್ತೀವಿ. ನಾವು ಮನುಷ್ಯರಲ್ವಾ? ಅಲ್ಲ ಅನ್ನೊದಾದ್ರೆ ನಮ್ಮ ಮತ ನಿಮಗ್ಯಾಕೆ ಹಾಕಬೇಕಂತ ದಬಾಯಿಸ್ತೀವಿ... ಹಾಂ' ಎಂದು ಅಸ್ರಜ್ಜ ಅಂಗಾರಾದ ಕೆಳಹಟ್ಟಿ ಜನರ ಮಾತನ್ನು ಲೆಕ್ಕಕ್ಕೆ ತೆಗೆದುಕೊಳ್ಳದ ಮೊಬ್ಬಳ್ಳಿ ಮಂದಿ ಮನೆ ಸೇರಿಕೊಂಡರು. ಬೆಪ್ಪಾದ ಮಾಲಿಂಗ ಸಂಜೆಯ ಬಸ್ ಹತ್ತಿದ. ನನಗೆ ಬರೋ ಕೂಲಿ ತಪ್ಪಿತಲ್ಲಾ ಮುಂದೇನು ಅಂತ ಕಳವಳಕ್ಕೀಡಾದ. ಮಾಲಿಂಗನಿಗೆ ದಿನಾ ಬಸ್ಸಲ್ಲಿ ಕೂತಾಗ ಬರುವ ನಿದ್ದೆ ಹತ್ತಿರ ಸುಳಿಯಲಿಲ್ಲ. ಇವರ ಕೈಲೇನಾದೀತು ಅಂತ ಮೊಬ್ಬಳ್ಳಿ ಜನ ಆರಾಮಾಗಿರೋ ಹೊತ್ತಿನಲ್ಲಿಯೇ ಪೇಟೆಯಿಂದ ಬಂದ ದಲಿತ ಸಂಘರ್ಷ ಸಮಿತಿಯ ಚಳವಳಿಗಾರರು ಗುಡಿ ಮುಂದೆ ಕೂತು ಘೋಷಣೆ ಕೂಗುತ್ತಾ ಧರಣಿಗಿಳಿದರು. ಕೆಳಹಟ್ಟಿ ಜನವೂ ಇವರೊಂದಿಗೆ ಸೇರಿಕೊಂಡಾಗ ದೊಡ್ಡ ಗುಂಪಾಯಿತು ಇವರ ಕೂಗು, ಬಂಡಾಯದ ಹಾಡುಗಳು ದೊಡ್ಡ ಜಾತಿಯವರ ಕಿವಿಗಳಿಗೆ ಕಾಯಿಸಿದ ಸೀಸೆ ಸುರುವಿದವು. ಗೌಡ ಶಾನುಭೋಗ ಅತ್ತ ತಿರುಗಿಯೂ ನೋಡಲಿಲ್ಲವಾದರೂ, ಸಿಟಿಯಿಂದ ಮಾಧ್ಯಮದ ಮಂದಿ ಬಿಜಯಂಗೈದರು. ಟೀವಿಗಳಲ್ಲಿ ಇವರ ಹೋರಾಟ ಸುದ್ದಿ ಆದವು. ಬೆಳಗಿನ ಪತ್ರಿಕೆಗಳಲ್ಲಿ ಮೊಬ್ಬಳ್ಳಿಯವರದ್ದೇ ದೊಡ್ಡ ನ್ಯೂಸು. ಸ್ವಾಸಕ ಗಿರಿತಿಮ್ಮಯ್ಯನವರಂತೂ ಸುಮ್ಮನಿರುವಂತಿಲ್ಲ. ಕೆಳಹಟ್ಟಿಯಲ್ಲೇ ಸಾವಿರಕ್ಕೂ ಹೆಚ್ಚು ಮತಗಳಿವೆ. ಇವರ್ನೆಲ್ಲಾ ಇತರೆಯವರ ಹಾಗೆ ಮತಗಟ್ಟೆಗೆ ಕರೆತರಲೂಬೇಕಿಲ್ಲ... ಈ ಜನಗಳೇ ಬಂದು ಓಟು ಮಾಡುವಷ್ಟು ಪ್ರಜ್ಞಾವಂತರೋ, ಖುಷಿಯೋ! ಒಟ್ಟಿನಲ್ಲಿ ಸಾಲಿಡ್ ಓಟುಗಳನ್ನು ಬಿಟ್ಟಾರುಂಟೆ? ಇಂತಹ ಸಮಯದಲ್ಲಿ ತನ್ನ ಇಮೇಜ್ ಏನಾದೀತೆಂದು ಗಾಬರಿಗೊಂಡ ಗಿರಿತಿಮ್ಮಯ್ಯ ತಮ್ಮ ಚೇಲಾಗಳೊಂದಿಗೆ ಮಾಲಿಂಗನ ಸಮೇತ ಎರಡು ಕಾರಿನಲ್ಲಿ ಬಂದಿಳಿದು, ಮೊದಲಿಗೆ ಚಳವಳಿಗಾರರನ್ನು ಓಲೈಸಿದರು. 'ನಾನೆಲ್ಲಾ ಸರಿ ಮಾಡುತ್ತೀನಿ ಬಂಧುಗಳೇ' ಅಂತ ಶರಣು ಮಾಡಿದವರೆ ಕಾರಲ್ಲಿ ಕೂತು ಮೊಬ್ಬಳ್ಳಿ ಒಳಗೆ ಬಂದರು.

ಊರಕಟ್ಟೆಯ ಮೇಲೆ ಊರ ಗೌಡ, ಶಾನುಭೋಗ ಇತರೆ ಜನ ದಿಗಿಲಿಗೆ ಬಿದ್ದು ಕೂತಿದ್ದರು. ದಲಿತರ ಜಾತಿ ಎತ್ತೆಣಿಸಿದರೆ ಜೈಲಿಗೂ ಹೋಗಬೇಕಾದೀತೆಂಬಷ್ಟು ಅರಿವು ಮೊಬ್ಬಳ್ಳಿಯವರಿಗಿತ್ತು. ಸ್ವಾಸಕನಂತೂ ನಮ್ಮವನಲ್ಲವೆ ಅಂತ ಗೌರವದಿಂದಲೇ ಬರಮಾಡಿಕೊಂಡರು. ಸ್ವಾಸಕರೂ ತುಂಬಾ ಸಿಡುಕದೆ ಹೇಳಬೇಕಾದ್ದನ್ನು ಮನಮುಟ್ಟುವಂತೆ ತಿಳಿಸಿ ಹೇಳಿದರು. 'ಕಾನೂನಿಗಿಂತ ಯಾರು ದೊಡ್ಡವರಲ್ಲ, ನಾನೂ ಸಹ ಅಂದಾಗ ನೀವು ಯಾವ ಲೆಕ್ಕ?' ಎಂದು ಭಯ ಹುಟ್ಟಿಸಿದರು. ಇಷ್ಟಾದರೂ ಮೊಬ್ಬಳ್ಳಿ ಮಂದಿ ಬಗ್ಗಲಿಲ್ಲ. ಅವರೆಲ್ಲಾ ಕಲೆತು ಮಾತಾಡಿ ತೀರ್ಮಾನಕ್ಕೆ ಬಂದರು. 'ನಮಗೆ ನಮ್ಮ ಜಾತಿ ನಮ್ಮ ದೇವರೇ ಮುಖ್ಯ. ಮೈಲಿಗೆಯಾದ ಆ ಗುಡೀನೆ ಬ್ಯಾಡ



ನಮಗೆ. ನಾವೇ ದುಡ್ಡು ಹಾಕಿ ಹೊಸ ದೇವಸ್ಥಾನ ಕಟ್ತೇವಿ ಸಾಹೇಬ್ರೆ' ಅಂತ್ಲೆ ಸೆಡ್ಡು ಹೊಡೆದರು.

'ಆತು ಬಿಡ್ರಪ್ಪಾ ಅದಕ್ಕೂ ನನ್ನ ಸಹಕಾರ ಅದೆ. ಅದ್ಕೆ ಅಂತ್ಲೆ ಅನುದಾನ ಬಿಡುಗಡೆ ಮಾಡಿಸ್ತೀನಿ. ಈಗ ನನ್ನ ಮಾತು ಕೇಳಿ. ಈ ಗುಡಿ ವಿಷಯ ದೊಡ್ಡದು ಮಾಡಬ್ಯಾಡ್ರಿ. ಬಂದು ಪೂಜೆ ಮಾಡಿ ಅಲ್ಲಿರೋ ಚಳವಳಿಗಾರ್ರಿಗೆ ಪ್ರಸಾದ ಕೊಟ್ಟಾಂಗ ಮಾಡಿಬಿಡ್ರತ್ತಾ. ಧರಣಿ ನಿಲ್ಲಿಸಿ ಸಿಟಿಕಡೆ ಹೋತವರೆ... ಬಾರಪ್ಪಾ ದೊರೆ' ಎಂದು ಸ್ವಾಸಕರು ಶಾನುಭೋಗನಿಗೆ ರಿಕ್ವೆಸ್ಟ್ ಮಾಡ್ಕೊಂಡರು. 'ಗೊತ್ತಾತು ಬಿಡ್ರಿ, ಯಲಕ್ಷನ್ ಟೈಮಲ್ವಾ... ಆ ಗುಡಿನಾಗೆ ನಂದು ಲಾಸ್ಟ್ ಪೂಜೆ' ಅಂದುಬಿಟ್ಟ ಶಾನುಭೋಗ. ದೇವರ ಮುಲಾಜಿಗೂ ಬೀಳದೆ ಕೊಟ್ಟ ಮಾತಿನಂತೆ ಹಿಂದೆಯೇ ಹೊರಟ ಶಾನುಭೋಗ ನಾರಾಯಣಸ್ವಾಮಿ ಗುಡಿ ಬೀಗ ತೆಗೆದು ದೀಪಗಳನ್ನು ಹಚ್ಚಿ ಮಂಗಳಾರತಿ ಬೆಳಗಿ ಎಲ್ಲರ ಎದುರು ತಟ್ಟೆ ಹಿಡಿದು ಬಂದ. ಎಲ್ಲಾ ಭಯ ಭಕ್ತಿಯಿಂದ ರಗಡ್ ಕಾಸು ಹಾಕಿ ಕೈಮುಗಿದರು. ತಟ್ಟೆಕಾಸನ್ನೆಲ್ಲಾ ಬಾಚಿ ತನ್ನ ಸೊಂಟಕ್ಕೆ ಎಂದಿನಂತೆ ಸಿಕ್ಕಿಸಿಕೊಂಡು ಗುಡಿಬಾಗಿಲು ಮುಚ್ಚಿ ಬೀಗ ಜಡಿದು, ಕೀಲಿಕೈನು ಸ್ವಾಸಕರತ್ತ ಹಿಡಿದ ಪೂಜಾರಿ ಕಂ ಶಾನುಬೋಗ. 'ಇದನ್ನಾಯಾಕ್ರಿ ನನಗೆ ಕೊಡ್ತಿರಾ' ಅವಕ್ಕಾದರು ಸ್ವಾಸಕ. 'ಇದೆ ನನ್ನ ಲಾಸ್ಟ್ ಪೂಜೆ ಅಂತೇಳಿಯೇ ಬಂದೀನಿ ಸಾಹೇಬ್ರೆ, ತಗೋಳ್ರಿ' ಅಂತ ಗರಮ್ ಆದಾಗ ಸ್ವಾಸಕ ಕೈಯೊಡ್ಡಿದ. 'ದೂರ ದೂರ ಸರೀರಿ' ಅಂತ ಸಿಡಿಮಿಡಿಗೊಳ್ಳುತ್ತಾ ಪೂಜಾರಿ ಅಲ್ಲಿಂದ ಹೊರಟು ಹೋದ. ಸ್ವಾಸಕರಿಗೆ ದಿಕ್ಕೇ ತೋಚಲಿಲ್ಲ. 'ಅಲ್ಲಾ ಬುದ್ಧಿ, ನಮ್ಮನ್ನ ಮುಟ್ಟೆಸಿಕ್ಕಂಬಲ್ಲ, ಊರಾಗೆ ಹೋದ್ರೂವೆ ಬರಿಗಾಲ್ನಾಗಿ ಹೋಗಿ ಇವರ ಚಾಕರಿ ಮಾಡ್ಬೇಕು. ಆದ್ರೆ ನಾವು ಆರತಿ ತಟ್ಟೆಗೆ ಹಾಕಿದ ಕಾಸನ್ನೆಲ್ಲಾ ಹೆಂಗೆ ಬಾಚ್ಕೊಂಡು ಹೊಂಟೋದ್ರು ನೋಡಿದ್ರಾ? ಕಾಸಿಗೆ ಮುಟ್ಟು ಮೈಲಿಗೆ ಇಲ್ಲವಾ ಹಂಗಾರೆ?' ಎಂದು ನೊಂದುಕೊಂಡ ಅಸ್ರಜ್ಜ.

'ಕಾಸಿಗೆ ಮಡಿಮೈಲಿಗೆ ಇಲ್ಲ ಕಣ್ಣಾ ಮುತ್ಯಾ. ಪೂಜಾರಿ ತಟ್ಟೆನಾಗಿದ್ರೆ ತಟ್ಟೆಕಾಸು, ಪಾಮರನಂತಾವಿದ್ರೆ ಬಿಡಿಗಾಸು. ಮಾರಜಂತಾವಿದ್ರೆ ನಾಣ್ಯ. ಮಾಸ್ವಾಮಿಗತಾವಿದ್ರೆ ಪಾದಕಾಣಿಕೆ. ವ್ಯಾಪಾರಿತಾವಿದ್ರೆ ಬಂಡವಾಳ. ರಾಜಕಾರಣಿತಾವಿದ್ರೆ ಯಲಕ್ಷನ್ ಫಂಡು. ಅದೇ ಕಾಸನ್ನ ಹೆಣದ ಮ್ಯಾಗೆ ತೂರಿದ್ರೆ ಚಿಲ್ಲರೆಕಾಸು. ಸಿನಿಮಾಸ್ಟಾರ್‌ಗಳ ಮ್ಯಾಲೆ ಎಸೆದ್ರೆ ಅಭಿಮಾನದ ಕಾಸು. ಗರತಿ ತಾವಿದ್ರೆ ಗಂಡನ ಕಾಸು. ಸೂಳೆ ತಾವಿದ್ರೆ ಮಿಂಡ್ರಿಕಾಸು, ಅದೇ ಕಾಸು ಹುಂಡಿಗೆ ಬಿತ್ತೋ ದೇವರ ಕಾಸು. ಕಾಸಿಗೆ ಎಲ್ಲೆ ಮಡಿ ಮೈಲಿಗೆನ್ರೋಯಪ್ಪಾ? ಕಾಸಿದ್ರೇ ಕೈಲಾಸ ಇಲ್ಲದಿದ್ರೆ ವನವಾಸ. ಈಗ ಆತು. 'ಈ ಕೀಲಿ ಕೈನಾ ನೀನ್ ತಗೋ ಅಸ್ರಜ್ಜ. ಯಾರಾರ ದೂಪದೀಪಕಾಣ್ಸೆ' ಅಂದ್ರು ಸ್ವಾಸಕ. 'ನ್ಯಾವ್ಯಾಕೆ ಮುಟ್ಟೇವು? ಪೂಜೆ ಮಾಡೆವು? ನಮಗೇನ್ ದ್ಯಾವರಿಲ್ವಾ? ನಮ್ಮ ಮಾರವ್ವ ದುಗ್ಗವ್ವಗಿಂತ ಪವರ್‌ಫುಲ್ಲಾ ಈ ನಾರಾಯಣಸ್ವಾಮಿ?' ಅಸ್ರಜ್ಜ ರೇಗಿದಲ್ಲಿ ಜಾಡಿಸಿ ಹೊಂಟೇ ಹೋದ. ಸ್ವಾಸಕ ಕಕರು ಮಕರಾದ... ಇದನ್ನೆಲ್ಲಾ ನೋಡಿ ಗರಬಡಿದವನಂತಾದ ಜೆಸಿಬಿ ಮಾಲಿಂಗ ದೇವರತ್ತ ಕನಿಕರದಿಂದ ನೋಡುತ್ತಾ ಸ್ವಾಸಕರನ್ನು ಕೇಳಿದ – 'ಬುದ್ಧಿ, ನಿಮ್ಮತಾವ ಯಾವ ನಂಬಿಕೆ ಮ್ಯಾಲೆ ಪೂಜಾರಪ್ಪ ಕೀಕೊಟ್ಟು ಹೋದರು?' 'ಅಯ್ಯೋ ದಡ್ಡ, ಗುಡಿ ಒಳಗೇನೈತೋ ಸಂಪತ್ತು? ಯಾವುದೋ ಕಾಲ್ದಾಗೆ ನಾರಾಯಣಸ್ವಾಮಿಗೆ ಉಡಿಸಿದ ಜರಿಪಂಚೆ, ಜರಿಶಲ್ಯ...' ಕೊಕ್ಕನೆ ನಕ್ಕರು ಸ್ವಾಸಕರು. 'ಅಲ್ ಬುದ್ಧಿ, ಇಗ್ರಹದ ಕೊಳ್ಳಾಗೆ ಚಿನ್ನದಸರ ಐತಲ್ರಾ?'

'ಅಯ್ಯೋ ನನ್ಮಗ್ನೆ ಅದೂ ನಾನು ಕೊಡಿಸಿದ ಸರ... ಚಿನ್ನದಲ್ಲ. ಯಾವುದೋ ಕಾಲದ ಉಮಾಗೋಲ್ಡ್' ಎಂದು ಮತ್ತದೇ ನಗಸಾರ. ಎಲ್ಲರೂ ನಕ್ಕಿದ್ದೇ ನಕ್ಕಿದ್ದು. 'ದೇವರಿಗೆ ಇನ್ ಆಗ್ತದೆ. ಪಾಪಾ ನಗಬ್ಯಾಡಿ ಪ್ಲೀಸ್' ಎಂದು ಹನಿಗಣ್ಣಾದ ಮಾಲಿಂಗ. 'ಹಂಗಾರೆ ಈ ಕೀಲಿಕ್ಕೆ ಗತಿ?' ಚಳವಳಿಕಾರರ ಪ್ರಶ್ನೆ. 'ಈವತ್ತು ಬಿಸಾಕಿ ಹೋದೋನೆ ವಾರೊಪ್ಪತ್ತಿನಾಗೆ ನಮ್ಮ ಮನೆತಾವ ಬಂದು ಈಸ್ಕೊಂಡು ಹೋತಾನೇಳ್ರಯ್ಯ' ಅಂದರು ಸ್ವಾಸಕರು.

'ನಾಳೆ ಒಂದಿನ ನಂದು ರಸ್ತೆ ಕೆಲಸ ಐತೆ ಬುದ್ಧಿ' ಅಂದಿದ್ದು ಮಾಲಿಂಗ. 'ಬ್ಯಾಡಬಿಡ್ಲಾ. ಒಬ್ಬನೇ ಇರ್ತಿಯಾ ಏನಾರ ಮಾಡ್ಯಾರು?' ಹೆದರಿದ್ದು ಸ್ವಾಸಕ.

'ನನ್ನ ತಂಟೆಗೆ ಬಂದ್ರೆ ಜೆಸಿಬಿನೇ ಮ್ಯಾಗತ್ತಿಸಿ ಬಿಡ್ತಿನಿ ಅಟೆಯಾ... ನಾಳೆ ಕೆಲಸ ಮುಗಿಸಿಬಿಡ್ತೀನಿ. ನಮ್ಮ ಕಂತ್ರಾಟುದಾರ ಬಿಲ್ ಕಳಿಸ್ತಾರೆ, ಬ್ಯಾಗ್ ಬಿಲ್ ಸೆಟ್ಲು ಮಾಡಿಬಿಡಿ ಬುದ್ಧಿ... ನಮ್ಮನ್ಗೆ ಹುಸಾರಿಲ್ಲ' ಎರಡು ಕೈ ಜೋಡಿಸಿದ ಮಾಲಿಂಗ.

ಪ್ರತಿಕ್ರಿಯಿಸಿ: feedback@sudha.co.in